Akashvani : Bangalore
National Bulletins In Kannada
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

05.07.2025 : 7.35AM

**********

ಮುಖ್ಯಾಂಶಗಳು

1. ಐದು ರಾಷ್ಟ್ರಗಳ ಪ್ರವಾಸದ ಮೂರನೇ ಚರಣದ ಭಾಗವಾಗಿ ಅರ್ಜೆಂಟೀನಾ ತಲುಪಿದ ಪ್ರಧಾನಿ ನರೇಂದ್ರ ಮೋದಿ
2. ಟ್ರಿನಿಡಾಡ್-ಟೊಬ್ಯಾಗೊ ಸಂಸತ್ತಿನ ಜಂಟಿ ಸದನವನ್ನುದ್ದೇಶಿಸಿ ಪ್ರಧಾನಿ ಭಾಷಣ; ಉಭಯ ರಾಷ್ಟ್ರಗಳ ನಡುವೆ ಆರು ಒಪ್ಪಂದಗಳಿಗೆ ಸಹಿ
3. ಪರಸ್ಪರ ಪ್ರಯೋಜನವಿದ್ದಲ್ಲಿ ಮಾತ್ರ ಮುಕ್ತ ವ್ಯಾಪಾರ ಒಪ್ಪಂದ ಸಾಧ್ಯ - ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್
4. ರ್‍ಯಾಪಿಡ್ ಮತ್ತು ಬ್ಲಿಟ್ಸ್ ಚೆಸ್ ಟೂರ್ನಿ; ಪ್ರಶಸ್ತಿ ಮುಡಿಗೇರಿಸಿಕೊಂಡ ಭಾರತದ ದೊಮ್ಮರಾಜು ಗುಕೇಶ್

**********

ತಮ್ಮ ಐದು ರಾಷ್ಟ್ರಗಳ ಭೇಟಿಯ ಮೂರನೇ ಚರಣದ ಭಾಗವಾಗಿ ಪ್ರಧಾನಿ ನರೇಂದ್ರ ಮೋದಿ ಇಂದು ಅರ್ಜೆಂಟೀನಾದ ರಾಜಧಾನಿ ಬ್ಯುನೋಸ್ ಏರ್ಸ್‌ಗೆ ತಲುಪಿದ್ದಾರೆ.ಈ ಭೇಟಿ ಜಾಗತಿಕ ದಕ್ಷಿಣದೊಂದಿಗೆ ಭಾರತದ ನಿಕಟ ಸಂಪರ್ಕವನ್ನು ಮತ್ತಷ್ಟು ಬಲಪಡಿಸುವ ಉದ್ದೇಶ ಹೊಂದಿದೆ. ಇಂದು ಸಂಜೆ ಅವರು ಅರ್ಜೆಂಟೀನಾದ ಖ್ಯಾತ ಸ್ವಾತಂತ್ರ್ಯ ಹೋರಾಟಗಾರ ಹಾಗೂ ರಾಷ್ಟ್ರೀಯ ನಾಯಕ ಜನರಲ್ ಜಾಸ್ ಡಿ ಸಾನ್ ಮಾರ್ಟಿನ್ ಅವರಿಗೆ ಗೌರವ ನಮನ ಸಲ್ಲಿಸಲಿದ್ದಾರೆ. ಬಳಿಕ ಪ್ರಧಾನಿ ಅವರಿಗೆ ಸಾಂಪ್ರದಾಯಿಕ ಸ್ವಾಗತ ಕೋರಲಾಗುವುದು.ಪ್ರಧಾನಿ ನರೇಂದ್ರ ಮೋದಿ, ಅರ್ಜೆಂಟೀನಾ ಅಧ್ಯಕ್ಷ ಜೇವಿಯರ್ ಮಿಲಿ ಅವರೊಂದಿಗೆ ನಿಯೋಗಮಟ್ಟದ ಮಾತುಕತೆ ನಡೆಸಲಿದ್ದಾರೆ. ಈ ಭೇಟಿ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಸದೃಢಗೊಳಿಸುವ ಜೊತೆಗೆ ಸಹಕಾರಕ್ಕಾಗಿ ವಿವಿಧ ಮಾರ್ಗಗಳನ್ನು ತೆರೆಯಲಿದೆ. ಈ ನಿಟ್ಟಿನಲ್ಲಿ ವ್ಯಾಪಾರ ಮತ್ತು ಹೂಡಿಕೆ, ಆರೋಗ್ಯ ಮತ್ತು ಔಷಧಿ, ರಕ್ಷಣೆ ಮತ್ತು ಭದ್ರತೆ, ಮೂಲಸೌಕರ್ಯ, ಗಣಿಗಾರಿಕೆ ಮತ್ತು ಖನಿಜ ಸಂಪನ್ಮೂಲ, ಕೃಷಿ ಹಸಿರು ಇಂಧನ, ಡಿಜಿಟಲ್ ನಾವಿನ್ಯತೆ, ತಂತ್ರಜ್ಞಾನ, ವಿಪತ್ತು

ನಿರ್ವಹಣೆ, ಶಿಕ್ಷಣ ಸೇರಿದಂತೆ ಬಹು ಆಯಾಮದ ವಿವಿಧ ಕ್ಷೇತ್ರಗಳಲ್ಲಿ ಸಹಕಾರ ಬಲವರ್ಧನೆಗೆ ಒತ್ತು ನೀಡಲಾಗುವುದು.

**********

ಪ್ರಧಾನಿ ನರೇಂದ್ರ ಮೋದಿ ತಮ್ಮ ಎರಡು ದಿನಗಳ ಟ್ರಿನಿಡಾಡ್ ಮತ್ತು ಟೊಬ್ಯಾಗೊ ಪ್ರವಾಸವನ್ನು ಯಶಸ್ವಿಯಾಗಿ ಸಂಪನ್ನಗೊಳಿಸಿದ್ದು, ನಿನ್ನೆ ಸಂಜೆ ಅವರು, ಟ್ರಿನಿಡಾಡ್ - ಟೊಬ್ಯಾಗೊ ಸಂಸತ್ತಿನ ಜಂಟಿ ಸದನವನ್ನುದ್ದೇಶಿಸಿ ಮಾತನಾಡಿದರು. ಈ ವೇಳೆ ಅವರು, ಪ್ರಜಾಪ್ರಭುತ್ವ ಭಾರತಕ್ಕೆ ಕೇವಲ ಒಂದು ರಾಜಕೀಯ ವ್ಯವಸ್ಥೆಯಲ್ಲ ಬದಲಿಗೆ ಒಂದು ಮೌಲ್ಯ ಮತ್ತು ಜೀವನಶೈಲಿಯಾಗಿದೆ ಎಂದು ಪ್ರತಿಪಾದಿಸಿದ್ದಾರೆ. ಪ್ರಜಾಪ್ರಭುತ್ವವನ್ನು ಒಂದು ಹಂಚಿಕೆಯ ಮೌಲ್ಯವಾಗಿ ವಿವರಿಸಿದ ಪ್ರಧಾನಿ, ಟ್ರಿನಿಡಾಡ್ - ಟೊಬ್ಯಾಗೋದಲ್ಲಿರುವ ಭಾರತೀಯ ಮೂಲದ ಮಹಿಳಾ ನಾಯಕರನ್ನು ಶ್ಲಾಘಿಸಿದರು. ಇದೇ ವೇಳೆ ಪ್ರಧಾನಿ, ಶಾಂತಿಪ್ರಿಯ ಸಮಾಜಕ್ಕೆ ಗಂಭೀರ ಬೆದರಿಕೆಯಾಗಿರುವ ಭಯೋತ್ಪಾದನೆ ವಿರುದ್ಧದ ಹೋರಾಟಕ್ಕೆ ಬಲ ನೀಡುವಂತೆ ಜಾಗತಿಕ ಸಮುದಾಯಕ್ಕೆ ಕರೆ ನೀಡಿದರು.

ಧ್ವನಿ - ಪ್ರಧಾನಮಂತ್ರಿ

ಸಂಸತ್ ಭಾಷಣದ ಬಳಿಕ ಪ್ರಧಾನಿ, ಟ್ರಿನಿಡಾಡ್-ಟೊಬ್ಯಾಗೊ ಪ್ರಧಾನಿ, ಕಮಲಾ ಪರ್ಸಾದ್ ಬಿಸ್ಸೆಸ್ಸರ್ ಅವರೊಂದಿಗೆ ವ್ಯಾಪಕ ವಿಷಯಗಳ ಕುರಿತಾಗಿ ಚರ್ಚೆ ನಡೆಸಿದರು. ಸಾಮಾಜಿಕ ಮಾಧ್ಯಮದಲ್ಲಿ ಪ್ರಧಾನಿ, ಉಭಯ ರಾಷ್ಟ್ರಗಳು ಆರ್ಥಿಕ ಸಂಬಂಧವನ್ನು ಬಲಪಡಿಸುವ ಬದ್ಧತೆ ತೋರಿದ್ದು, ವಿಪತ್ತು ನಿರ್ವಹಣೆ, ಹವಾಮಾನ ಬದಲಾವಣೆ, ರಕ್ಷಣೆ, ತಂತ್ರಜ್ಞಾನ, ಆರೋಗ್ಯ ಸೇವೆ ಮತ್ತು ಕೃಷಿ ಸಂಶೋಧನೆಯಂತಹ ಕ್ಷೇತ್ರಗಳಲ್ಲಿ ಸಹಕಾರ ಬಲವರ್ಧನೆ ಒಮ್ಮತ ವ್ಯಕ್ತಪಡಿಸಿವೆ ಎಂದು ಸೂಚಿಸಿದರು. ಇದೇ ವೇಳೆ ಪ್ರಧಾನಿ, ಜಾಗತಿಕ ದಕ್ಷಿಣದ ಧ್ವನಿಗೆ ಮತ್ತಷ್ಟು ಬಲ ನೀಡುತ್ತ ಭಾರತ - ಕ್ಯಾರಿಕಾಮ್ ಸಂಬಂಧಗಳಿಗೆ ಬದ್ಧರಿರುವುದಾಗಿ ಪುನರುಚ್ಚರಿಸಿದರು. ಮಾತುಕತೆಯ ಬಳಿಕ ಉಭಯನಾಯಕರು, ವಿವಿಧ ವಲಯಗಳಲ್ಲಿ ಸಹಕಾರ ಸಂಬಂಧ ಬಲವರ್ಧಿಸುವ ಆರು ಒಪ್ಪಂದಗಳಿಗೆ ಸಹಿ ಹಾಕಿದರು. ಪ್ರವಾಸದ ಭಾಗವಾಗಿ ಪ್ರಧಾನಿ, ಟ್ರಿನಿಡಾಡ್-ಟೊಬ್ಯಾಗೊ ಅಧ್ಯಕ್ಷರಾದ ಕ್ರಿಸ್ಟಿನ್ ಕಾರ್ಲಾ ಕಂಗಲು ಅವರನ್ನು ಭೇಟಿಯಾದರು. ಭಾರತ ಮತ್ತು ಟ್ರಿನಿಡಾಡ್ ಮತ್ತು ಟೊಬ್ಯಾಗೊ ನಡುವೆ ಸಹಿ ಹಾಕಲಾದ ಒಪ್ಪಂದಗಳು ಉಭಯ ರಾಷ್ಟ್ರಗಳ ನಡುವಿನ ಸಾಂಸ್ಕೃತಿಕ, ಕ್ರೀಡಾ ಮತ್ತು ಶೈಕ್ಷಣಿಕ ಸಹಕಾರವನ್ನು ಬಲವರ್ಧಿಸಲಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ದಕ್ಷಿಣ ವಲಯದ ಕಾರ್ಯದರ್ಶಿ ನೀನಾ ಮಲ್ಹೋತ್ರ ತಿಳಿಸಿದ್ದಾರೆ.

ಪೋರ್ಟ್ ಆಫ್ ಸ್ಪೇನ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಭೇಟಿಯ ಕುರಿತು ಸುದ್ದಿಗಾರರಿಗೆ ಮಾಹಿತಿ ನೀಡಿದ ಅವರು, ಈ ಭೇಟಿಯ ವೇಳೆ, ಸಾಗರೋತ್ತರ ಭಾರತೀಯ ಪೌರತ್ವ - ಒಸಿಐ ಕಾರ್ಡ್ ಸೌಲಭ್ಯವನ್ನು ೬ನೇ ತಲೆಮಾರಿನ ಭಾರತೀಯ ಮೂಲದ ಸದಸ್ಯರಿಗೆ ವಿಸ್ತರಿಸುವುದು ಸೇರಿದಂತೆ  ಹಲವು ಪ್ರಮುಖ ಘೋಷಣೆಗಳನ್ನು ಮಾಡಲಾಗಿದೆ. ಟ್ರಿನಿಡಾಡ್-ಟೊಬ್ಯಾಗೊದ ಜನಸಂಖ್ಯೆಯಲ್ಲಿ ಭಾರತೀಯ ಸಮುದಾಯ ಶೇಕಡ ೪೦ ರಿಂದ ೪೫ರಷ್ಟು ಪಾಲು ಹೊಂದಿದೆ ಎಂದು ತಿಳಿಸಿದರು.

**********

ನಾಳೆ ಮತ್ತು ನಾಡಿದ್ದು ಬ್ರೆಜಿಲ್‌ನ ರಿಯೊ ಡಿ ಜನ್ಯೆರೋದಲ್ಲಿ ನಡೆಯಲಿರುವ ಬ್ರಿಕ್ಸ್ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳಲಿದ್ದಾರೆ. ಈ ವೇಳೆ ಪ್ರಧಾನಿ, ಬ್ರಿಕ್ಸ್ ಶೃಂಗದ ಹತ್ತು ಇತರ ರಾಷ್ಟ್ರಗಳ ನಾಯಕರೊಂದಿಗೆ ವೇದಿಕೆ ಹಂಚಿಕೊಳ್ಳಲಿದ್ದಾರೆ. ಬ್ರಿಕ್ಸ್ ಜಾಗತಿಕ ಜಿಡಿಪಿಯ ಶೇಕಡ ೨೯ರಷ್ಟು ಹಾಗೂ ಜಾಗತಿಕ ವ್ಯಾಪಾರದ ಶೇಕಡ ೨೩ರಷ್ಟು ಪಾಲನ್ನು ಪ್ರತಿನಿಧಿಸುತ್ತದೆ. ನೇರ ವಿದೇಶಿ ಬಂಡವಾಳದ ಶೇಕಡ ೨೪ರಷ್ಟನ್ನು ಮತ್ತು ಜಾಗತಿಕ ತೈಲ ಉತ್ಪಾದನೆಯ ಶೇಕಡ ೪೩ರಷ್ಟನ್ನು ಬ್ರಿಕ್ಸ್ ಕೊಡುಗೆ ನೀಡುತ್ತದೆ. ಬ್ರೆಜಿಲ್ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ಈ ಬಾರಿಯ ಬ್ರಿಕ್ಸ್ ಶೃಂಗಸಭೆ, ಜಾಗತಿಕ ಆರೋಗ್ಯ, ವ್ಯಾಪಾರ, ಹೂಡಿಕೆ ಮತ್ತು ಹಣಕಾಸು, ಹವಾಮಾನ ಬದಲಾವಣೆ, ಕೃತಕ ಬುದ್ಧಿಮತ್ತೆ ನಿರ್ವಹಣೆ, ಬಹು ಆಯಾಮದ ಶಾಂತಿ ಮತ್ತು ಭದ್ರತಾ ಮೂಲಸೌಕರ್ಯ ಹಾಗು ಸಾಂಸ್ಥಿಕ ಅಭಿವೃದ್ಧಿ ಸೇರಿದಂತೆ ಒಟ್ಟು ೬ ಆದ್ಯತಾ ಕ್ಷೇತ್ರಗಳಾಗಿ ಪರಿಗಣಿಸಲಾಗಿದೆ. ಬ್ರಿಕ್ಸ್ ಶೃಂಗಸಭೆ ನಂತರ ಪ್ರಧಾನಿ ನರೇಂದ್ರ ಮೋದಿ ಅವರ ಬ್ರೆಝಿಲ್ ಭೇಟಿ ಮಹತ್ವದ್ದಾಗಿದೆ.  ಈ ವೇಳೆ ಅವರು ಅಧ್ಯಕ್ಷ ಲೂಯಿಜ್ ಇನಾಸಿಯೋ ಲುಲಾ ಡಿಸಿಲ್ವ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಿ, ಹಲವು ಒಪ್ಪಂದಗಳಿಗೆ ಸಹಿ ಹಾಕುವ ನಿರೀಕ್ಷೆಯಿದೆ. ಭಾರತದ ಪ್ರಧಾನಿಯೊಬ್ಬರು ಬ್ರೆಜಿಲ್‌ಗೆ ಕೈಗೊಂಡಿರುವ ಆರು ದಶಕಗಳಲ್ಲೇ ಮೊದಲ ಭೇಟಿ ಇದಾಗಿದೆ.

**********

ಭಾರತ ವ್ಯಾಪಾರ ಒಪ್ಪಂದಗಳನ್ನು ಕಾಲಮಿತಿ ಆಧಾರವಾಗಿ ಅಲ್ಲದೆ, ತನ್ನದೇ ಕೆಲವು ನಿಬಂಧನೆಗಳೊಂದಿಗೆ ಮಾಡಿಕೊಳ್ಳುತ್ತಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ. ನವದೆಹಲಿಯಲ್ಲಿ ನಿನ್ನೆ ಅಮೆರಿಕದೊಂದಿಗಿನ ವ್ಯಾಪಾರ ಒಪ್ಪಂದದ ಕುರಿತು ಮಾತನಾಡಿದ ಅವರು, ಪರಸ್ಪರ ಪ್ರಯೋಜನವಿದ್ದಲ್ಲಿ ಮಾತ್ರ ಮುಕ್ತ ವ್ಯಾಪಾರ ಒಪ್ಪಂದ ಸಾಧ್ಯ. ರಾಷ್ಟ್ರದ ಹಿತಾಸಕ್ತಿಗೆ ಅನುಗುಣವಾಗಿ ಹಾಗೂ ಪೂರ್ಣ ಪ್ರಮಾಣದ

ಮಾತುಕತೆಗಳ ನಂತರ ಮಾತ್ರವೇ ದೇಶ ಒಂದು ವ್ಯಾಪಾರ ಒಪ್ಪಂದವನ್ನು ಒಪ್ಪಿಕೊಳ್ಳಲು ಸಾಧ್ಯ. ಪ್ರಸ್ತುತ ಅಮೆರಿಕ ಐರೋಪ್ಯ ಒಕ್ಕೂಟ ಮತ್ತು ನ್ಯೂಜಿಲೆಂಡ್ ಸೇರಿದಂತೆ ವಿವಿಧ ರಾಷ್ಟ್ರಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವ ಕುರಿತಂತೆ ಚರ್ಚೆಗಳು ಮುಂದುವರಿದಿವೆ.

ಕೇಂದ್ರ ಸಚಿವ ಪಿಯೂಷ್ ಗೋಯಲ್ ಇಂದು ಬೆಂಗಳೂರಿನ ದೇವನಹಳ್ಳಿಯ ಕೆ.ಐ.ಎ.ಡಿ.ಬಿ ರಫ್ತು ಉತ್ತೇಜನ ಕೈಗಾರಿಕಾ ಪ್ರದೇಶದಲ್ಲಿರುವ ಏರೋಸ್ಪೇಸ್ ವಿಶೇಷ ಆರ್ಥಿಕ ವಲಯಕ್ಕೆ ಭೇಟಿ ನೀಡಲಿದ್ದು, ಸಿಬ್ಬಂದಿಯೊಂದಿಗೆ ಸಂವಾದ ನಡೆಸಲಿದ್ದಾರೆ.

**********

ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ-ಎನ್‌ಪಿಎಸ್ ಅಡಿಯಲ್ಲಿ ಪ್ರಸ್ತುತ ಲಭ್ಯವಿರುವ ಎಲ್ಲಾ ತೆರಿಗೆ ಪ್ರಯೋಜನಗಳನ್ನು ಹೊಸದಾಗಿ ಪರಿಚಯಿಸಲಾದ ಏಕೀಕೃತ ಪಿಂಚಣಿ ಯೋಜನೆ-ಯುಪಿಎಸ್ ಗೂ ವಿಸ್ತರಿಸಲಾಗುವುದು ಎಂದು ಸರ್ಕಾರ ಘೋಷಿಸಿದೆ. ತೆರಿಗೆ ಚೌಕಟ್ಟಿನಡಿಯಲ್ಲಿ ಯುಪಿಎಸ್, ಸೇರ್ಪಡೆಯು ಹೊಂದಿಕೊಳ್ಳುವ, ಪಾರದರ್ಶಕ ಮತ್ತು ತೆರಿಗೆ-ಸಮರ್ಥ ಆಯ್ಕೆಗಳ ಮೂಲಕ ಕೇಂದ್ರ ಸರ್ಕಾರಿ ನೌಕರರಿಗೆ ನಿವೃತ್ತಿ ಭದ್ರತೆಯನ್ನು ಬಲಪಡಿಸುವ ಸರ್ಕಾರದ ಪ್ರಯತ್ನದಲ್ಲಿ ಇದು ಮತ್ತೊಂದು ಹೆಜ್ಜೆಯಾಗಿದೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ.

**********

ಕ್ರೊಯೇಷಿಯಾದ ಜಾಗ್ರೇಬ್‌ನಲ್ಲಿ ನಡೆದ ೨೦೨೫ರ ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾದ ರ್‍ಯಾಪಿಡ್ ಮತ್ತು ಬಿಟ್ಸ್ ಪಂದ್ಯಾವಳಿಯ ಪ್ರಶಸ್ತಿಯನ್ನು ಹಾಲಿ ವಿಶ್ವ ಚಾಂಪಿಯನ್ ದೊಮ್ಮರಾಜು ಗುಕೇಶ್ ತಮ್ಮದಾಗಿಸಿಕೊಂಡಿದ್ದಾರೆ. ೧೯ ವರ್ಷದ ಭಾರತೀಯ ಆಟಗಾರ ಗುಕೇಶ್, ಅಂತಿಮ ಸುತ್ತಿನಲ್ಲಿ ಅಮೆರಿಕದ ವೆಸ್ಲಿಸೋ ಅವರನ್ನು ರ್‍ಯಾಪಿಡ್ ವಿಭಾಗದಲ್ಲಿ ಸೋಲಿಸುವ ಮೂಲಕ ಪ್ರಶಸ್ತಿ ತಮ್ಮದಾಗಿಸಿಕೊಂಡರು. ಒಟ್ಟು ಗಳಿಸಬಹುದಾದ ೧೮ ಅಂಕಗಳಲ್ಲಿ ಗಮನಾರ್ಹ ೧೪ ಅಂಕಗಳನ್ನು ಪಡೆದು, ಗುಕೇಶ್ ಅಂಕಪಟ್ಟಿಯಲ್ಲಿ ಅಗ್ರ ಸ್ಥಾನ ಅಲಂಕರಿಸಿದರು. ೧೧ ಅಂಕಗಳೊಂದಿಗೆ ಪೋಲ್ಯಾಂಡ್‌ನ ಜಾನ್ ಕರ್ಜಿಸ್‌ಟಾಫ್ ಎರಡನೇ ಸ್ಥಾನದಲ್ಲಿದ್ದರೆ, ಮಾಜಿ ವಿಶ್ವ ಚಾಂಪಿಯನ್ ಹಾಗೂ ವಿಶ್ವ ಅಗ್ರ ಶ್ರೇಯಾಂಕಿತ ನಾರ್ವೆಯ ಮ್ಯಾಗ್ನಸ್ ಕಾರ್ಲಸನ್ ೧೦ ಅಂಕಗಳೊಂದಿಗೆ ಮೂರನೇ ಸ್ಥಾನ ಪಡೆದರು. ಪಂದ್ಯಾವಳಿಯಲ್ಲಿ ಕಣಕ್ಕಿಳಿದಿದ್ದ ಮತ್ತೊಬ್ಬ ಭಾರತೀಯ ಆಟಗಾರ ಪ್ರಜ್ಞಾನಂದ ರಮೇಶ್‌ಬಾಬು ೯ ಅಂಕಗಳೊಂದಿಗೆ ಫ್ಯಾಭಿಯಾನೋ ಕರುವಾನ ಅವರೊಂದಿಗೆ ೪ನೇ ಸ್ಥಾನವನ್ನು ಹಂಚಿಕೊಂಡಿದ್ದಾರೆ.

**********

ಬರ್ಮಿಂಗ್‌ಹ್ಯಾಮ್‌ನ ಎಡ್ಜ್‌ಬ್ಯಾಸ್ಟನ್‌ನಲ್ಲಿ ನಡೆಯುತ್ತಿರುವ ಭಾರತ - ಇಂಗ್ಲೆಂಡ್ ನಡುವಿನ ಆಂಡರ್‌ಸನ್ - ತೆಂಡೂಲ್ಕರ್ ಟ್ರೋಫಿಯ ಎರಡನೇ ಟೆಸ್ಟ್ ಪಂದ್ಯದ ನಾಲ್ಕನೇ ದಿನವಾದ ಇಂದು, ದಿನದಾಟ ಭಾರತೀಯ ಕಾಲಮಾನ ಅಪರಾಹ್ನ ೩.೩೦ಕ್ಕೆ ಆರಂಭವಾಗಲಿದ್ದು, ಭಾರತ ತನ್ನ ಎರಡನೇ ಇನ್ನಿಂಗ್ಸ್‌ಅನ್ನು ಮುಂದುವರಿಸಲಿದೆ.

**********